ದಿನಾಂಕ 30/10/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಎಂ.ಎಂ. ಪ್ರತಿವಾದಿ ಪರ ವಕೀಲರಿಂದ**

ದಾವಾ ಆಸ್ತಿಯನ್ನು ನಾಗಮ್ಮ ರವರ ಕಡೆಯಿಂದ ಖರೀದಿ ಮಾಡಿರುತ್ತೇನೆ. ನಾಗಮ್ಮ ರವರ ಗಂಡನ ಹೆಸರು ಆಂಜಪ್ಪ ಇರುತ್ತಾರೆ. ಆಂಜಪ್ಪ ರವರಿಗೆ ಚಿಕ್ಕಹನುಮಪ್ಪ ಒಬ್ಬ ಅಣ್ಣ ಇದ್ದು, ಪ್ರತಿವಾದಿಯರು ಚಿಕ್ಕಹನುಮಪ್ಪನ ವಾರಸುದಾರರು ಇರುತ್ತಾರೆ. ಚಿಕ್ಕಹನುಮಪ್ಪನ ತಮ್ಮ ಹೆಸರು ಆಂಜಪ್ಪ ಇರುವುದಿಲ್ಲ ಪುಜಾರಿ ಆಂಜಪ್ಪ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಾಗಮ್ಮ ಇವರಿಗೆ ಅವರ ಗಂಡ ಕಡೆಯಿಂದ ಬಂದಿರುತ್ತದೆ. ನಾಗಮ್ಮನ ಗಂಡನಿಗೆ ಯಾವ ರೀತಿ ಬಂದಿರುತ್ತದೆ ನನಗೆ ಗೊತ್ತಿರುವುದಿಲ್ಲ. ಸದರಿ ನಾಗಮ್ಮ ಮತ್ತು ಆಕೆಯ ಗಂಡನನಿಗೆ ದಾವಾ ಆಸ್ತಿ ಯಾವ ರೀತಿ ಬಂದಿರುತ್ತದೆ ಎಂಬುದರ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ.

2. ದಾವಾ ಚಕ್ಕುಬಂದಿ ಮತ್ತು ಕ್ರಯ ಪತ್ರದಲ್ಲಿ ತೋರಿಸಿರುವ ಚಕ್ಕುಬಂದಿಯಲ್ಲಿ ನಾಗಮ್ಮ ಮತ್ತು ನಾಗಮ್ಮನ ಗಂಡನಿಗೆ ಯಾವುದೇ ನಿವೇಶ ಮತ್ತು ಮನೆ ಇರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಚಕ್ಕುಬಂದಿಯಲ್ಲಿ ಆಸ್ತಿ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ಸರ್ವೆನಂ-28/21 ರಲ್ಲಿ ದಾವಾ ಮನೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಪ್ರತಿವಾದಿಗಳು ವಾಸ ಇರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ-28/21 ದಿ.13/08/1975 ರಂದು 1 ನೇ ಪ್ರತಿವಾದಿ ಚಿಕ್ಕಹನುಮಪ್ಪ 1 ಮುಕ್ಕಾಲು ಗುಂಟೆಯನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಕ್ರಯಕ್ಕೆ ಪಡೆದಾಗಿನಿಂದಲೂ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾನು ಬರೆಸಿಕೊಂಡಿರುವ ಖಾತೆ ನಂಬರ್ ದಾವಾ ಆಸ್ತಿಯ ಚಕ್ಕುಬಂದಿ ಇರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ಉದ್ದೇಶಪೂರ್ವಕವಾಗಿ ಪ್ರತಿವಾದಿಗಳಿಗೆ ಸೇರಿದ ಮನೆಯನ್ನು ಹೊಡೆಯುವ ಉದ್ದೇಶದಿಂದ ಸುಳ್ಳು ಕ್ರಯ ಪತ್ರ ಮಾಡಿಕೊಂಡು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಖರೀದಿಸಿರುವ 1 ಮುಕ್ಕಾಲು ಗುಂಟೆ ಆಸ್ತಿಯ ಪೂ-ರಸ್ತೆ, ಪ-ಬಂಡಿ ದಾರಿ ಮತ್ತು ಕೆರೆ ಕಾಲುವೆ, ಉ-ಇದೇ ಸರ್ವೆನಂಬರ್ ಚಿಕ್ಕಲಿಂಗಪ್ಪ ರವರಿಗೆ ಸೇರಿದ ಜಮೀನು ಮತ್ತು ದ-ಚಿಕ್ಕಹನುಮಪ್ಪ ರವರಿಗೆ ಮಾರಾಟ ಮಾಡಿದ ಜಾಗ ಇರುತ್ತದೆ ಎಂದರೆ ಸರಿ. ಮೇಲೆ ಹೇಳಿದ ಚಕ್ಕುಬಂದಿ ಆಸ್ತಿಗೆ ನಾನು ದಾವೆ ಹೂಡಿರುತ್ತೇವೆ ಎಂದರೆ ಸರಿ. ನಾನು ದಾವೆ ಹೂಡಿರುವ ಜಾಗ ನಾಗಮ್ಮ ಮತ್ತು ಆಕೆಯ ಗಂಡನಿಗೆ ಎಂದಿಗೂ ಸೇರಿರುವುದಿಲ್ಲ ಎಂದರೆ ಸರಿಯಲ್ಲ. ನಾಗಮ್ಮ ರವರ ಊರಿನ ಒಳಗೆ ಇರುವ ಮನೆ ಬಿದ್ದು ಹೊಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಕೊಂಡುಕೊಂಡಿರುವ ನಿವೇಶನ ಬಳಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ.

4. ನಾನು ಊರಿನ ಒಳಗೆ ಇರುವ ಖಾತೆ ನಂಬರ್ ಬದಲಾಗಿ ಚಿಕ್ಕಹನುಮಪ್ಪ ರವರ ಆಸ್ತಿಗೆ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ-28/21 1 ಮುಕ್ಕಾಲು ಗುಂಟೆ ಚಿಕ್ಕಹನುಮಪ್ಪ ಸ್ವಯಾರ್ಜಿತವಾಗಿ ಖರೀದಿಸಿ ಆಸ್ತಿ ಇರುತ್ತದೆ ಎಂದರೆ ಸಾಕ್ಷಿ ಸದರಿ ಆಸ್ತಿ ಬೇರೆ ಕಡೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಾನು ಯಾವುದೇ ನಿವೇಶನ ಮತ್ತು ಮನೆಯನ್ನು ಖರೀದಿಸಿರುವುದಿಲ್ಲ. ನಾನು ಪ್ರತಿವಾದಿಗಳ ಮನೆಯ ಹೊಡೆಯುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿ ಆಸ್ತಿ ನಾಗಮ್ಮ ಮತ್ತು ಆಕೆಯ ಗಂಡನಿಗೆ ಸೇರಿದ ಆಸ್ತಿ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸುತ್ತೇನೆ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ